52

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗಣಕೀಕೃತ ಹಕ್ಕು ಬದಲಾವಣೆ ಪಹಣಿಗಳನ್ನು ರೈತರಿಗೆ ಒದಗಿಸಲು ಶುಲ್ಕ ಸಂಗ್ರಹಿಸುವ ಕುರಿತು.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಕಂಇ 62 ಎಂಆರ್‌ಆರ್ 2000 ದಿನಾಂಕ 19.4.2001

**ಪ್ರಸ್ತಾವನೆ:** ಪಹಣಿಗಳ ಗಣಕೀಕರಣ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ, ಮತ್ತು ಪ್ರತಿ ತಾಲ್ಲೂಕಿನಲ್ಲಿ ರೈತರಿಗೆ ಅವಶ್ಯಕತೆ ಇದ್ದಲ್ಲಿ ಬೇಕೆಂದಾಗ ಪಹಣಿಗಳನ್ನು ನೀಡಲು ಕಿಯಾಸ್ಕ್ ನಡೆಸುವಲ್ಲಿ ಹೆಚ್ಚಿನ ಆವರ್ತಕ ವೆಚ್ಚ ತಗಲುತ್ತದೆ. ಈ ಆವರ್ತಕ ವೆಚ್ಚವನ್ನು ಭರಿಸಲು ತಾಲ್ಲೂಕು ಕೇಂದ್ರಗಳಲ್ಲಿ ನೀಡಲಾಗುವ ಪಹಣಿಗಳ ಪ್ರತಿ ಒಂದಕ್ಕೆ ರೂ.15.00 ಗಳ ಶುಲ್ಕ ವಿಧಿಸಲು ಮೇಲೆ ಓದಲಾದ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಭೂಮಿ ಯೋಜನೆ ಕಾರ್ಯಕ್ರಮದಲ್ಲಿ ಹಕ್ಕು ಬದಲಾವಣೆಗಳನ್ನು ಗಣಕೀಕರಣಗೊಳಿಸಲು ಅವಕಾಶವಿದ್ದು, ರೈತರು ಹಕ್ಕು ಬದಲಾವಣೆ ಉದ್ಧೃತ ಭಾಗಗಳನ್ನು (Mutation extract) ಒದಗಿಸುವಂತೆ ಕೋರಿಕೆ ಸಲ್ಲಿಸಿರುತ್ತಾರೆ. ಆದ್ದರಿಂದ ಹಕ್ಕು ಬದಲಾವಣೆ ಉದ್ಧೃತ ಭಾಗಗಳನ್ನು ನೀಡಲು ಪ್ರತಿ ಒಂದಕ್ಕೆ ರೂ.15.00 ಗಳ ಶುಲ್ಕ ವಿಧಿಸಲು ಪ್ರಸ್ತಾಪಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಂಇ 62 ಎಂಆರ್‌ಆರ್ 2000**

**ಬೆಂಗಳೂರು, ದಿನಾಂಕ : 15.10.2001**

ಸರ್ಕಾರವು ಮೇಲ್ಕಾಣಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಲಾಗುತ್ತಿರುವ ಕಿಯಾಸ್ಕ್ ಗಳ ಮುಖಾಂತರ ಪ್ರತಿ ರೈತರಿಗೆ ಒದಗಿಸುವ ಹಕ್ಕು ಬದಲಾವಣೆ ಉದ್ಧೃತ ಭಾಗಗಳನ್ನು (Mutation extract) ನೀಡಲು ಪ್ರತಿ ಒಂದಕ್ಕೆ ರೂ.15.00 ಗಳ (ಹದಿನೈದು ರೂಪಾಯಿಗಳು ಮಾತ್ರ) ಶುಲ್ಕವನ್ನು ಸಂಗ್ರಹಿಸಲಾಗುವುದು.

ಸದರಿ ಮೊತ್ತವನ್ನು ಲೆಕ್ಕಶೀರ್ಷಿಕೆ 0029-00-800-0-01 "01-ಸೇವೆ ಸಲ್ಲಿಸಿದ್ದಕ್ಕೆ ಮಾಡಿದ ಪಾವತಿ ವಸೂಲಿ " ಅಡಿಯಲ್ಲಿ ಜಮಾ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್.ಡಿ.1404/ವೆಚ್ಚ-7/2001 ದಿನಾಂಕ 5.10.2001ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೀವ್ ಚಾವ್ಲಾ)
ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಸುಧಾರಣೆ)

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ವಿಭಾಗಾಧಿಕಾರಿಗಳು
3. ಎಲ್ಲಾ ಜಿಲ್ಲಾಧಿಕಾರಿಗಳು
4. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
5. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ-4)
6. ಮಾನ್ಯ ಕಂದಾಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
7. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ.
8. ಬಿಡಿ ಪ್ರತಿಗಳು.